# ಕರ್ನಾಟಕ ವಿಧಾನ ಪರಿಷತ್ತು

<table>
<tr><td colspan="2">ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ</td><td>1250 (1329)</td></tr>
<tr><td colspan="2">ಮಾನ್ಯ ಸದಸ್ಯರ ಹೆಸರು</td><td>ಶ್ರೀ ಗೋವಿಂದರಾಜು (ವಿಧಾನ ಸಭಾ ಕ್ಷೇತ್ರ)</td></tr>
<tr><td colspan="2">ಉತ್ತರಿಸುವ ಸಚಿವರು</td><td>ಉನ್ನತ ಶಿಕ್ಷಣ ಸಚಿವರು</td></tr>
<tr><td colspan="2">ಉತ್ತರಿಸಬೇಕಾದ ದಿನಾಂಕ</td><td>16.03.2026</td></tr>
<tr><td colspan="2">ಪ್ರಶ್ನೆ</td><td>ಉತ್ತರ</td></tr>
<tr><td>ಅ)</td><td>ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಮುದ್ರಿತ ಮಾರ್ಕ್ಸ್ ಕಾರ್ಡ್‌ಗಳನ್ನು ನೀಡದೇ ಎಷ್ಟು ವರ್ಷಗಳಿಂದ ಬಾಕಿ ಉಳಿಸಿಕೊಳ್ಳಲಾಗಿದೆ ಇದಕ್ಕೆ ಕಾರಣಗಳೇನು;</td><td rowspan="4">ಕೇಂದ್ರ ಸರ್ಕಾರದ ಮಹತ್ವದ ಯೋಜನೆಯಾದ National Academic Depository (NAD) ಯೋಜನೆಯನ್ನು ಎಲ್ಲಾ ವಿಶ್ವವಿದ್ಯಾಲಯಗಳು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಡಿಜಿಟಲ್ ಅಂಕಪಟ್ಟಿಗಳನ್ನು ಸಿದ್ಧಪಡಿಸಿ Karnataka State Data Centre (KSDC) ನಲ್ಲಿ ಶೇಖರಿಸಿ ಮತ್ತು ಪ್ರತಿಗಳನ್ನು NAD ಮತ್ತು Digilocker ನಲ್ಲಿ ಕಡ್ಡಾಯವಾಗಿ ಅಳವಡಿಸಿ ಅನುಷ್ಠಾನಗೊಳಿಸುವಂತೆ ಹಾಗೂ ಅಂಕಪಟ್ಟಿಗಳನ್ನು ಮತ್ತು ಪ್ರಮಾಣಪತ್ರಗಳನ್ನು ಮುದ್ರಿಸದಿರಲು ಕ್ರಮವಹಿಸುವಂತೆ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸರ್ಕಾರದ ಪತ್ರ ಸಂಖ್ಯೆ: 323 ಯುಎನ್‌ಇ 2020, ದಿನಾಂಕ:28.02.2022ರ ಪತ್ರದನ್ವಯ ನಿರ್ದೇಶನ ನೀಡಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 323 ಯುಎನ್‌ಇ 2020, ದಿನಾಂಕ: 14.09.2022ರ ಆದೇಶದಲ್ಲಿ Digilocker-NAD ನಲ್ಲಿ ಸಂಗ್ರಹಿಸಿರುವ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ವ್ಯಾಸಂಗ, ಉದ್ಯೋಗ ಹಾಗೂ ಅವಶ್ಯವಿರುವ ಕಡೆಗಳಲ್ಲಿ ಸಿಂಧುವೆಂದು ಪರಿಗಣಿಸುವಂತೆ ಆದೇಶ ಹೊರಡಿಸಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 34 ಇಜಿಒವಿ 2021, ದಿನಾಂಕ:16.02.2023ರಲ್ಲಿ ಮೆ: ಕಿಯೋನಿಕ್ಸ್ ಸಂಸ್ಥೆಯವರ EDGS ತಂತ್ರಾಂಶವನ್ನು ಬಳಸಿಕೊಂಡು ವಿಶ್ವವಿದ್ಯಾಲಯಗಳು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು Online/Digital format ನಲ್ಲಿ ತಯಾರಿಸಿ ವಿತರಿಸಲು ಹಾಗೂ ಪ್ರತಿಗಳನ್ನು ಶೇಖರಿಸುವ ಯೋಜನೆಯನ್ನು ಅನುಷ್ಠಾನಗೊಳಿಸುವಂತೆ ಸೂಚಿಸಿದ್ದು ಸರ್ಕಾರದ ಆದೇಶ ಸಂಖ್ಯೆ: ಇಡಿ 16 ಇಜಿಒವಿ 2018 ದಿನಾಂಕ: 31.05.2019ರ ಆದೇಶವನ್ನು ಹಿಂಪಡೆಯಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಇಜಿಒವಿ 2023, ದಿನಾಂಕ; 16.10.2023ರಲ್ಲಿ 2023-24ನೇ ಶೈಕ್ಷಣಿಕ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆಯಡಿಲ್ಲಿನ ಅಧೀನ ಇಲಾಖೆಗಳು, ಸಾರ್ವಜನಿಕ ವಿಶ್ವವಿದ್ಯಾಲಯಗಳು ಹಾಗೂ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು, ಪದವಿ ಮತ್ತು</td></tr>
<tr><td>ಆ)</td><td>ಮುದ್ರಿತ ಅಂಕಪಟ್ಟಿ ನೀಡಿಕೆ ತೀರಾ ತಡವಾಗುತ್ತಿರುವುದರಿಂದ ಪ್ರತಿಷ್ಠಿತ ಕಂಪನಿಗಳಲ್ಲಿ ದಾಖಲೆ ದೃಢೀಕರಣ ಹಂತದಲ್ಲಿ ಅಂಕಪಟ್ಟಿಯಿಲ್ಲದೆ ಉದ್ಯೋಗ ಪಡೆದುಕೊಳ್ಳಲು ಪದವಿ, ಸ್ನಾತಕೋತ್ತರ ಪದವಿದರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td></tr>
<tr><td>ಇ)</td><td>ಅಂಕಪಟ್ಟಿ ಶುಲ್ಕ ಕಟ್ಟಿಸಿಕೊಂಡರೂ ಅಂಕಪಟ್ಟಿ ಸಕಾಲಕ್ಕೆ ನೀಡುತ್ತಿಲ್ಲ, ಡಿಜಿಟಲ್ ಲಾಕರ್‌ನಲ್ಲಿ ಅಂಕಪಟ್ಟಿ ಲಭ್ಯ ಎಂದು ಹೇಳಿದರೂ ಅಂತಿಮ ಎರಡು ಸೆಮಿಸ್ಟರ್‌ಗಳ ಅಂಕಪಟ್ಟಿ ತಕ್ಷಣಕ್ಕೆ ಸಿಗುತ್ತಿಲ್ಲ ಹಾಗೂ ಯೂನಿವರ್ಸಿಟಿ, ಕಾಲೇಜುಗಳಿಂದ ನೀಡುವ ಪ್ರಾವಿಷನ್ ಸರ್ಟಿಫಿಕೆಟ್ ಒಪ್ಪಿಕೊಂಡು ಎಲ್ಲಾ ಕಂಪನಿಗಳು ಕೆಲಸ ನೀಡುವುದಿಲ್ಲ ಎಂಬುದು ಸರ್ಕಾರದ ಅಧಿಕಾರಿಗಳ ಗಮನಕ್ಕೆ ಬಂದಿದೆಯೇ;</td></tr>
<tr><td>ಈ)</td><td>ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಎಷ್ಟು ಸಮಯಾವಕಾಶದ ಅವಶ್ಯಕತೆಯಿದೆ ಈ ಅವ್ಯವಸ್ಥೆಗೆ ಕಾರಣಕರ್ತರು ಯಾರು;</td></tr>
</table>

ಸ್ನಾತಕೋತ್ತರ ಪದವಿ ಅಂಕಪಟ್ಟಿಗಳು, ಪ್ರಮಾಣ ಪತ್ರಗಳು ಮತ್ತು ಇತರೆ ಶೈಕ್ಷಣಿಕ ದಾಖಲೆಗಳನ್ನು NAD-Digilocker ನಲ್ಲಿ ಡಿಜಿಟಲ್ ರೂಪದಲ್ಲಿ ಕಡ್ಡಾಯವಾಗಿ ಸಂಗ್ರಹಿಸಿಡಲು ಉನ್ನತ ಶಿಕ್ಷಣದ ವಿದ್ಯಾರ್ಥಿಗಳು ಸದರಿ ಅಂಕಪಟ್ಟಿಗಳ Credits ಗಳನ್ನು ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಆದೇಶಿಸಿದೆ. ವಿವಿಧ ನೇಮಕಾತಿ ಪ್ರಾಧಿಕಾರಗಳು / ಸಂಸ್ಥೆಗಳು ನೇಮಕಾತಿ ಸಮಯದಲ್ಲಿ NAD-Digilocker ನಲ್ಲಿ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ದೃಢೀಕೃತವೆಂದು ಪರಿಗಣಿಸುವಂತೆ ಆದೇಶಿಸಲಾಗಿದೆ.

ಅದರನ್ವಯ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಅಂಕಪಟ್ಟಿಗಳನ್ನು ಮುದ್ರಿಸದೇ, NAD-Digilocker ಮೂಲಕ ಸೆಮಿಸ್ಟರ್ ಪ್ರಕಾರದ ಅಂಕಪಟ್ಟಿಗಳನ್ನು ಅಪ್‌ಲೋಡ್ ಮಾಡಲು UUCMS ನಲ್ಲಿ ಇಂಟರ್‌ಫೇಸ್ ರಚಿಸಲಾಗಿದ್ದು, ಫಲಿತಾಂಶಗಳನ್ನು ಮತ್ತು ಪ್ರಮಾಣಪತ್ರಗಳನ್ನು 24 ಗಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳದೇ ಅಪ್‌ಲೋಡ್ ಮಾಡಲಾಗುತ್ತಿದೆ. UUCMS ನಲ್ಲಿ ಅಂಕಪಟ್ಟಿಗಳನ್ನು Normal Sheet ಅಥವಾ Pre-printed paper ನಲ್ಲಿ print ತೆಗೆಯುವ ಅವಕಾಶವನ್ನು ಸಹ ಕಲ್ಪಿಸಲಾಗಿದ್ದು, ಅದರನ್ವಯ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಕ್ರಮವಹಿಸುತ್ತಿವೆ.

ಮುಂದುವರೆದು, ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷೆಗಳ ಫಲಿತಾಂಶ ಪ್ರಕ್ರಿಯೆ ಪೂರ್ಣಗೊಂಡ ನಂತರ ವಿಶ್ವವಿದ್ಯಾಲಯಗಳ ಮೌಲ್ಯಮಾಪನ ಕುಲಸಚಿವರುಗಳು Digital Marks card / data ವನ್ನು NAD-Digilocker ಗೆ ವರ್ಗಾಯಿಸುವ (Push) ಮಾಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಈ ಮಾಹಿತಿಯು Automatically NAD-Digilocker ನಲ್ಲಿ ಗೋಚರಿಸುವುದರಿಂದ ಅಥವಾ ಲಭ್ಯವಾಗುವುದರಿಂದ, ವಿದ್ಯಾರ್ಥಿಗಳು ತಮ್ಮ ಆಧಾರ್ ಸಂಖ್ಯೆ ನಮೂದಿಸಿ ಅಂಕಪಟ್ಟಿಗಳನ್ನು Download ಮಾಡಿಕೊಳ್ಳಲು ಅವಕಾಶವಿರುತ್ತದೆ.

ಕೆಲವೊಂದು ವಿಶ್ವವಿದ್ಯಾಲಯಗಳು ತಾಂತ್ರಿಕ ದೋಷದಿಂದಾಗಿ ಅಂಕಪಟ್ಟಿಗಳನ್ನು ತಡವಾಗಿ ವಿತರಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಇಜಿಒವಿ 2023, ದಿನಾಂಕ: 16.10.2023ರನ್ವಯ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಅಂಕಪಟ್ಟಿಗಳನ್ನು ಮುದ್ರಿಸದೇ, NAD-Digilocker ಮೂಲಕ ಸೆಮಿಸ್ಟರ್ ಪ್ರಕಾರದ ಅಂಕಪಟ್ಟಿಗಳನ್ನು ಅಪ್‌ಲೋಡ್ ಮಾಡಲು ಕಡ್ಡಾಯವಾಗಿ ಕ್ರಮವಹಿಸಲು ಸೂಚಿಸಲಾಗಿರುತ್ತದೆ.

**ಸಂಖ್ಯೆ**: ಇಡಿ 73 ಯುಎನ್‌ಇ 2026

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು